ಪಾರಾದ ಕತೆಯನ್ನು ಮುಂದೊಮ್ಮೆ ಸಂದರ್ಶನವೊಂದರಲ್ಲಿ ಲೋಹಿಯಾ ಹೇಳಿದರು:

‘ನಾವಿದ್ದ ಜೈಲು ಪೂರಾ ಜೈಲಿನಂತಿರಲಿಲ್ಲ. ಮೂರು ಗೋಡೆ. ಒಂದು ಕಡೆ ಓಪನ್. ಅದರೊಳಗೆ ನಾವು ಏಳು ಜನ ಒಬ್ಬರ ಬದಿಗೊಬ್ಬರು ಮಲಗಿದ್ದೆವು. ನಮ್ಮನ್ನು ಕಾಯಲು ಗನ್ ಹಿಡಿದ ಇಬ್ಬರು ಸೆಂಟ್ರಿಗಳಿದ್ದರು. ಆಝಾದ್ ದಸ್ತಾದ ಯೋಧರು ಮಧ್ಯರಾತ್ರಿಯಲ್ಲೋ, ಮಧ್ಯರಾತ್ರಿಯ ನಂತರವೋ ಜೈಲಿನತ್ತ ಬಂದರು. ಬರುವ ಹೊತ್ತಿಗೆ ಎಲ್ಲಾ ಕೆಲಸಗಳನ್ನೂ ಕರಾರುವಾಕ್ಕಾಗಿ ಮಾಡಿ ಬಂದಿದ್ದರು. ಇಸ್ರೇಲ್ ವಿರುದ್ಧದ ಹೋರಾಟದಲ್ಲಿ ಅರಬ್ಬರು ಸರಿಯಾಗಿ ಪ್ಲ್ಯಾನ್ ಮಾಡದೆ ಮಾಡಿದ್ದ ತಪ್ಪನ್ನು ಈ ತಂಡ ಮಾಡಿರಲಿಲ್ಲ! ಅಂದರೆ, ಇಲ್ಲಿಗೆ ಬರುವ ಮೊದಲೇ ಟೆಲಿಗ್ರಾಫ್, ಟೆಲಿಫೋನ್ ವೈರುಗಳನ್ನು ಕತ್ತರಿಸಿದ್ದರು. ಬಂದವರೇ ಸೆಂಟ್ರಿಗಳ ಮೇಲೆ ಗುಂಡು ಹಾರಿಸಿದರು. ಪ್ರತಿಯಾಗಿ ಸೆಂಟ್ರಿಗಳೂ ಗುಂಡು ಹಾರಿಸಿದರು. ನಾನೂ, ಜಯಪ್ರಕಾಶ್ ಅಕ್ಕಪಕ್ಕ ಮಲಗಿದ್ದೆವು; ನನಗಂತೂ ನಿದ್ದೆ ಬಂದಿತ್ತು. ಏನೋ ಗಲಾಟೆ ಕೇಳಿಸಿತು. ಮೇಲೆದ್ದಾಗ ಹೊರಗೆ ಬುಲೆಟ್ಟುಗಳ ಸದ್ದು ಕೇಳುತ್ತಿತ್ತು. ಒಬ್ಬರೋ ಇಬ್ಬರೋ ಸೆಂಟ್ರಿಗಳು ಸತ್ತರೆಂದು ಕಾಣುತ್ತದೆ. ಅದು ದುರದೃಷ್ಟಕರ. ನಾನು ಯಾವ ಥರದ ಸಾವನ್ನೂ ಇಷ್ಟಪಡುವವನಲ್ಲ. ಅದಿರಲಿ, ನಾವು ಅಲ್ಲಿಂದ ಪಾರಾದೆವು.

ಆದರೆ ಸಮಸ್ಯೆಗಳು ಎದುರಾಗುತ್ತಲೇ ಇದ್ದವು. ಪೊಲೀಸರು ಬೆನ್ನ ಹಿಂದೆಯೇ ಇದ್ದರು. ನಮ್ಮ ಜೊತೆಗಿರುತ್ತಿದ್ದ ಸಂಗಾತಿಗಳು ಬದಲಾಗುತ್ತಿದ್ದರು. ದಾರಿಯಲ್ಲಿ ಹೀಗೆ ನಮ್ಮ ಜೊತೆಯಾದವರಲ್ಲಿ ಒಬ್ಬ ಪಿಕ್ ಪಾಕೆಟ್ ಮಾಡಿದ್ದಾನೆ ಎಂದು ರೈಲ್ವೇ ಪೊಲೀಸರು ಅವನ ಬೆನ್ನು ಹತ್ತಿದರು. ಅವನು ನಮ್ಮ ಕಂಪಾರ್ಟ್‌ಮೆಂಟಿಗೆ ಬಂದು ನನ್ನ ಬಟ್ಟೆ ಕೇಳಿದ. ನನಗೆ ದಿಗಿಲಾಯ್ತು. ಯಾಕೆಂದರೆ, ನಾನು ಅವನ ಜೊತೆಯವನು ಅಂತ ಪೊಲೀಸರು ನನ್ನನ್ನೂ ಅರೆಸ್ಟ್ ಮಾಡುವ ಸಾಧ್ಯತೆ ಇತ್ತು! ಕೊನೆಗೂ ಕಲ್ಕತ್ತಾ ತಲುಪಿದೆ. ದೊಡ್ಡ ಸಿಟಿ. ಸ್ವಲ್ಪ ಸೇಫ್ ಅನ್ನಿಸಿತು!’

ಹೀಗೆ ಹನುಮಾನ್ ನಗರದಿಂದ ತಾನು, ಜೆ.ಪಿ. ಹಾಗೂ ಇತರರು ತಪ್ಪಿಸಿಕೊಂಡ ಕತೆ ಹೇಳುತ್ತಾ ಲೋಹಿಯಾ ಆಝಾದ್ ದಸ್ತಾದ ಸಾಧನೆಗಳನ್ನು ನೆನೆದರು:

‘ಆಝಾದ್ ದಸ್ತಾ ಉತ್ತರ ಪ್ರದೇಶ, ಬಿಹಾರ ರಾಜ್ಯಗಳಲ್ಲಿ ಕೊನೇ ಪಕ್ಷ ಒಂದು ವಾರ, ಹತ್ತು ದಿನಗಳ ಕಾಲವಾದರೂ ಬ್ರಿಟಿಷ್ ಆಡಳಿತವೇ ಇಲ್ಲದಂತೆ ಮಾಡಿತ್ತು. ಉತ್ತರ ಪ್ರದೇಶದ ಬಲ್ಲಿಯಾದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರನ್ನೇ ತಂಡ ಅರೆಸ್ಟ್ ಮಾಡಿತ್ತು. ಇದೆಲ್ಲ ಭಾಳಾ ಜನಕ್ಕೆ ಗೊತ್ತಿಲ್ಲ.’

ನೇಪಾಳದ ಪೊಲೀಸರಿಂದ ಪಾರಾದ ಲೋಹಿಯಾ ಅಸ್ಸಾಂಗೆ ಹೋಗಿ ಅಲ್ಲಿಂದ ಮುಂದೆ ಸಾಗಿ ನೇತಾಜಿ ಸುಭಾಷ್‌ಚಂದ್ರ ಬೋಸರನ್ನು ಸೇರಿಕೊಳ್ಳಲು ಯೋಚಿಸಿದರು. ನೇತಾಜಿಯ ಸಂಪರ್ಕ ಸಾಧ್ಯವಾಗಲಿಲ್ಲ. ಅತ್ತ ಮೇಹರಾಜ್

## ಕಳೆದ ಸಂಚಿಕೆಯಲ್ಲಿ



ವಿಶ್ವಯುದ್ಧದ ಸಂದರ್ಭದಲ್ಲಿ ಲೋಹಿಯಾ ಯುದ್ಧವಿರೋಧಿ ಭಾಷಣ ಮಾಡಿದ್ದಕ್ಕೆ ರಾಜದ್ರೋಹ ಕಾಯ್ದೆಯಡಿ ಬಂಧನಕ್ಕೊಳಗಾದರು; ಕೋರ್ಟಿನಲ್ಲಿ ತಾವೇ ವಾದ ಮಂಡಿಸಿ ಖುಲಾಸೆಯಾದರು. ರಾಜ್ಯಪಾಲರುಗಳ ದಬ್ಬಾಳಿಕೆಯನ್ನು ವಿರೋಧಿಸಿ ಭಾಷಣ ಮಾಡಿದಾಗ ಮತ್ತೆ ಬಂಧನವಾಯಿತು. ಬರೈಲಿ ಜೈಲಿನಲ್ಲಿದ್ದಾಗ ಸಮಾಜವಾದಿ ಸಂಗಾತಿ ಪೂರ್ಣಿಮಾ ಬ್ಯಾನರ್ಜಿ ಲೋಹಿಯಾರನ್ನು ನೋಡಲು ಜೈಲಿಗೆ ಹೋದರು. ಇಬ್ಬರ ನಡುವೆ ಮೋಹ ತರಂಗಗಳು ಸುಳಿದಾಡುತ್ತಿದ್ದ ರಮ್ಯ ಸುದ್ದಿ ಆ ಕಾಲದಲ್ಲಿತ್ತು! ಗಾಂಧೀಜಿ ನೀಡಿದ ‘ಮಾಡು, ಇಲ್ಲವೇ ಮಡಿ’ ಕರೆಗೆ ಲೋಹಿಯಾ ತಮ್ಮದೇ ರೀತಿಯಲ್ಲಿ ಸ್ಪಂದಿಸಿದರು. ಭೂಗತರಾಗಿ ಸ್ವಾತಂತ್ರ್ಯ ಚಳುವಳಿಯನ್ನು ಜಾಗೃತವಾಗಿಡಲು ಪ್ರಯತ್ನಿಸಿದರು. ಲೋಹಿಯಾ ಮಾರ್ಗದರ್ಶನದಲ್ಲಿ ‘ಕರೇಂಗೆ ಯಾ ಮರೇಂಗೆ’ ಭೂಗತ ಪತ್ರಿಕೆ ಹೊರಬರತೊಡಗಿತು. ‘ಕಾಂಗ್ರೆಸ್ ರೇಡಿಯೊ’ ಪ್ರಸಾರ ಜನರ ಗಮನ ಸೆಳೆಯತೊಡಗಿತು. ಪ್ರಸಾರ ಶುರುವಾಗಿ ಮೂರು ತಿಂಗಳವರೆಗೂ ಬೇಹುಗಾರರರಿಗೆ ಈ ಭೂಗತ ರೇಡಿಯೊವನ್ನು ಪತ್ತೆ ಹಚ್ಚಲಾಗಿರಲಿಲ್ಲ. ಈ ರೇಡಿಯೊ ತಂಡಕ್ಕೆ ಉಷಾ ಮೆಹ್ತಾ ಎಂಬ ಧೀರ ತರುಣಿಯೂ ಸೇರಿಕೊಂಡಳು.

ಮೆಹತಾ ಎಂಬ ಹೆಸರಿನಲ್ಲಿ ರೈಲಿನಲ್ಲಿ ಕಲ್ಕತ್ತಾಕ್ಕೆ ಹೊರಟಿದ್ದ ಜೆ.ಪಿ. ಪೊಲೀಸರಿಗೆ ಸಿಕ್ಕಿಬಿದ್ದರು.

ಸರ್ಕಾರ ಲೋಹಿಯಾರನ್ನು ಹಿಡಿದು ಕೊಟ್ಟವರಿಗೆ ಭಾರಿ ಬಹುಮಾನ ಘೋಷಿಸಿತು. ಈ ಘಟ್ಟದಲ್ಲಿ ಭೂಗತ ಹೋರಾಟದ ಚಟುವಟಿಕೆ ಮುಂದುವರಿಸುವುದು ಲೋಹಿಯಾಗೆ ಕಠಿಣವಾಗತೊಡಗಿತು. ಜೊತೆಗಾರರು ಬಂಧನದಲ್ಲಿದ್ದರು; ಉಳಿದವರು ಭಯದ ನೆರಳಿನಲ್ಲೇ ಬದುಕುತ್ತಿದ್ದರು. ಅವು ಆಗಸ್ಟ್ ಕ್ರಾಂತಿಯ ಕೊನೆಯ ದಿನಗಳಂತಿದ್ದವು.

ಆಗಸ್ಟ್ ಕ್ರಾಂತಿಯ ಕಾಲದಲ್ಲಿ ಲೋಹಿಯಾಗೆ ಸಾಮಾನ್ಯ ಮಹಿಳೆಯರ, ಪುರುಷರ ಉತ್ಕಟ ದೇಶಪ್ರೇಮದಂತೆಯೇ ಉನ್ನತ ಅಧಿಕಾರವಲಯದ ಕೆಲವರಲ್ಲಿ ಹುದುಗಿದ್ದ ದೇಶಪ್ರೇಮಿ ಬಂಡುಕೋರತನದ ದರ್ಶನವೂ ಆಯಿತು. ಇಂಥದೊಂದು ಅನುಭವ ಕುರಿತು ಲೋಹಿಯಾ ಮುಂದೊಮ್ಮೆ ಬರೆದರು: ‘ಇಂಡಿಯಾದ ವಾಯುಪಡೆ ಸದಾ ವೀರರೂ, ದೇಶಭಕ್ತರೂ ಆದ ಜನರಿಂದಲೇ ಕೂಡಿತ್ತೆಂಬುದನ್ನು ನಾನು ನೆನೆಯುವೆ. ತಮ್ಮ ಗೆಳೆಯರ ನಡುವೆ ‘ಜೋಬೋ’ ಎಂದೇ ಪರಿಚಿತರಾಗಿದ್ದ ವಿಂಗ್ ಕಮ್ಯಾಂಡರ್ ಮಜುಂದಾರ್ 1942ರ ಕಾಲಕ್ಕೆ ಇಂಡಿಯಾದ ವಾಯುಪಡೆಯ ಅತ್ಯುನ್ನತ ಅಧಿಕಾರಿಯಾಗಿದ್ದರು. ಆಗ ಅವರು ಇಂಡಿಯಾದ ಸ್ವಾತಂತ್ರ್ಯ ಹೋರಾಟಗಾರರ ಜೊತೆ ಆರಾಮಾಗಿ ಎರಡು ಗಂಟೆ ಕಳೆದಿದ್ದರು; ಅಷ್ಟೇ ಅಲ್ಲ, ಆಗಸ್ಟ್ ಕ್ರಾಂತಿಯಂಥದೇ ಇನ್ನೊಂದೇನಾದರೂ ಸಂಭವಿಸಿದರೆ ಅದಕ್ಕೆ ವಾಯುಪಡೆಯ ಸಂಪೂರ್ಣ ಸಹಕಾರ ದೊರಕುವುದೆಂದು ಭರವಸೆ ಕೊಟ್ಟಿದ್ದರು.’

ಜೋಬೋ 1944ರಲ್ಲಿ ಲಾಹೋರ್ ಪ್ರದೇಶದಲ್ಲಿ ವಿಮಾನ ಹಾರಾಟದಲ್ಲಿದ್ದಾಗ ವಿಮಾನದಲ್ಲಿ ಸ್ಫೋಟವಾಯಿತು; ಜೋಬೋ ತೀರಿಕೊಂಡರು. ಇದು ಬ್ರಿಟಿಷ್ ಸರ್ಕಾರವೇ ಮಾಡಿರುವ ಕೊಲೆಯಿರಬೇಕೆಂದು ಲೋಹಿಯಾ ಅನುಮಾನಪಟ್ಟರು.

ಲೋಹಿಯಾ ಕಂಡ ಜೋಬೋ ಥರದ ದಿಟ್ಟ ಅಧಿಕಾರಿಗಳ ಚಿತ್ರದ ಎದುರು ಕಾಂಗ್ರೆಸ್ ರೇಡಿಯೋ ಮಾನಿಟರ್ ಮಾಡುತ್ತಿದ್ದ ಅಯ್ಯಂಗಾರ್ ಥರ ಬ್ರಿಟಿಷರೆದುರು ಹೊಟ್ಟೆ ಹೊರೆಯುವ ಹುಳಗಳಂತಿದ್ದ ಭಕ್ತಾಧಿಕಾರಿಗಳ ತದ್ವಿರುದ್ಧ ಚಿತ್ರವೂ ನೆನಪಾಗುತ್ತದೆ! ಅದರ ಬೆನ್ನಿಗೇ, ಸ್ವಾತಂತ್ರ್ಯ ಯೋಧರು ತಪ್ಪಿಸಿಕೊಳ್ಳಲು ನೆರವಾದ ಪೊಲೀಸರ ಕಾಳಜಿ, ಕಳಕಳಿಗಳ ಚಿತ್ರಗಳೂ ಕಣ್ಮುಂದೆ ಬರುತ್ತವೆ.

ಮಧು ಲಿಮಯೆ ಬರೆಯುತ್ತಾರೆ: ‘ಭೂಗತ ಚಳುವಳಿಯಲ್ಲಿ ತಾವು ವಹಿಸಿದ ಪಾತ್ರದ ಬಗ್ಗೆ ಲೋಹಿಯಾ ಎಂದೂ ಎದೆಯುಬ್ಬಿಸಿ ಹೇಳಿಕೊಂಡವರಲ್ಲ; ಅಷ್ಟೇ ಅಲ್ಲ, ಕ್ರಾಂತಿಗಾಗಿ ಉಪಯುಕ್ತ ಸಂಘಟನೆ ಮಾಡುವ ನಿಟ್ಟಿನಲ್ಲಿ ತಮ್ಮಿಂದ ಹೆಚ್ಚಿನದೇನೂ ಸಂದಿಲ್ಲ ಎಂದೇ ಅವರು ಹೇಳುತ್ತಿದ್ದರು. ಆದರೆ ಆಲೋಚನೆ ಹಾಗೂ ಕಾರ್ಯಾಚರಣೆಗಳ ದೃಷ್ಟಿಯಿಂದ ಭೂಗತ ಸಂಘಟನೆಯಲ್ಲಿ ಲೋಹಿಯಾ ಕೊಡುಗೆ ಅಸಾಧಾರಣವಾದುದಾಗಿತ್ತು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕೇಂದ್ರ ಸ್ಥಾನಗಳೆನಿಸಿದ್ದ ಪೊಲೀಸ್ ಠಾಣೆ, ಅಂಚೆ ಮತ್ತು ತಂತಿ ಕಚೇರಿ, ರೈಲ್ವೇ ಸ್ಟೇಷನ್‌ಗಳ ಮೇಲೆ ಹಲ್ಲೆ ಮಾಡಿ ವಿದೇಶಿ ರಾಜ್ಯಭಾರದ ಬುಡ ಅಲ್ಲಾಡಿಸಿದ ಯೋಜನೆ ಲೋಹಿಯಾ ಅವರದೇ ಆಗಿತ್ತು. ಜೊತೆಗೆ, ಅವರು ಪ್ರಜೆಗಳ ಜೀವಹಾನಿ ಆಗದಂತೆ ಎಚ್ಚರಿಕೆ ವಹಿಸುವುದೂ ಮುಖ್ಯ ಎಂದುಕೊಂಡಿದ್ದರು.’